Q-330-(103)

ಮಾನ್ಯ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ಆರ್.ಪಾಟೀಲ್ ಇವರು ನಿಯಮ 330ರಡಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ.

ಸೂಚನಾ ಪತ್ರದ ವಿಷಯ:

ರಾಜ್ಯದ ಪ್ರಜೆಗಳ ರಕ್ಷಣೆಯನ್ನು ಮಾಡುವುದಕ್ಕೆ ಹಗಲಿರುಳು ಎನ್ನದೇ ದಿನದ 24 ಗಂಟೆಗಳು ಅವಿರತ ಸೇವೆಯನ್ನು ಸಲ್ಲಿಸುತ್ತಿರುವ ಪೊಲೀಸ್ ಇಲಾಖೆಯಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ಪರಿಷ್ಕರಿಸಲು ನೇಮಿಸಲಾಗಿದ್ದ ಶ್ರೀ ರಾಘವೇಂದ್ರ ಔರದ್ಕರ್ ರವರ ವರದಿಯಂತೆ ಸರ್ಕಾರವು ದಿನಾಂಕ: 16-07-2019ರಂತೆ ಪೊಲೀಸ್ ಇಲಾಖೆಯ ವೇತನವನ್ನು ಪರಿಷ್ಕರಿಸಿ ಆದೇಶಿಸಲಾಗಿರುತ್ತದೆ.

ಈ ಆದೇಶದನ್ವಯ ಪೊಲೀಸ್ ಇಲಾಖೆಯೇ ಮೂಲ ವೇತನವನ್ನು ಪರಿಷ್ಕರಿಸಿ ಫಿಟ್‌ಮೆಂಟ್ ಮಾಡಿ ಆದೇಶಿಸಲಾಗಿದೆ. ಆದರೆ, ಈ ಆದೇಶಕ್ಕೆ ಪ್ರತಿಯಾಗಿ ಹಣಕಾಸು ಇಲಾಖೆಯಿಂದ ಪೊಲೀಸ್ ಇಲಾಖೆಗೆ ಯಾವುದೇ ಫಿಟ್‌ಮೆಂಟ್ ಮಾಡದೇ ಮತ್ತೊಂದು ಆದೇಶವನ್ನು ಹೊರಡಿಸಲಾಗಿದ್ದು, ಇದರಿಂದ ಕಿರಿಯ ಹಾಗೂ ಹಿರಿಯ ಸಿಬ್ಬಂದಿಗಳಿಗೆ ಭೇದ-ಭಾವ ಮಾಡಿದಂತಾಗಿದ್ದು, ಇದರಿಂದ ಸುಮಾರು 7 ವರ್ಷ ಸೇವೆ ಸಲ್ಲಿಸಿದ ಸಿಬ್ಬಂದಿಗಳಿಗೆ ಹಾಗೂ ಹೊಸದಾಗಿ ಸೇವೆಗೆ ಸೇರ್ಪಡೆಗೊಂಡ ಸಿಬ್ಬಂದಿಗಳಿಗೂ ಒಂದೇ ವೇತನ ಶ್ರೇಣಿಯನ್ನು ನೀಡಿರುವ ಕಾರಣ ಈಗಾಗಲೇ ಸೇವೆಯನ್ನು ಸಲ್ಲಿಸಿರುವ ಸಿಬ್ಬಂದಿಗಳಲ್ಲಿ ತಾರತಮ್ಯವಾಗಿರುವ ಬಗ್ಗೆ:-

ಸರ್ಕಾರದ ಉತ್ತರ:

ರಾಜ್ಯ ಸರ್ಕಾರದ ನೀತಿಯಂತೆ ಮತ್ತು ರೂಢಿಯ ಪದ್ಧತಿಯಂತೆ, ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಹುದ್ದೆಗಳ ವೇತನ ಶ್ರೇಣಿಗಳನ್ನು, ರಾಜ್ಯ ಸರ್ಕಾರವು ಕಾಲದಿಂದ ಕಾಲಕ್ಕೆ ರಚಿಸುವ ರಾಜ್ಯ ವೇತನ ಆಯೋಗ/ವೇತನ ಸಮಿತಿಗಳಂತಹ ತಜ್ಞ ಸಮಿತಿಗಳ ಶಿಫಾರಸ್ಸುಗಳ ಪ್ರಕಾರ ಪರಿಶೀಲಿಸಿ ಪರಿಷ್ಕರಿಸಲಾಗುತ್ತದೆ.

ಪೊಲೀಸ್ ಇಲಾಖೆಯ ಕೆಲವು ಹುದ್ದೆಗಳ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಬಗ್ಗೆ ಪೊಲೀಸ್ ಇಲಾಖೆಯಿಂದ (ಒಳಾಡಳಿತ ಇಲಾಖೆ) ರಚಿಸಲಾಗಿದ್ದ ಶ್ರೀ ರಾಘವೇಂದ್ರ ಔರಾದಕರ್ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿದ 6ನೇ ರಾಜ್ಯ ವೇತನ ಆಯೋಗವು, ಪೊಲೀಸ್ ಇಲಾಖೆಯ ವಿವಿಧ ವರ್ಗದ 5 ಹುದ್ದೆಗಳ ವೇತನ ಶ್ರೇಣಿಗಳನ್ನು ಪರಿಷ್ಕರಿಸುವಂತೆ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸನ್ನು ಪರಿಶೀಲಿಸಿದ ರಾಜ್ಯ ಸರ್ಕಾರವು ದಿನಾಂಕ: 16-07-2019ರ ಸರ್ಕಾರಿ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಪಿ 2019ರಲ್ಲಿ, ಪೊಲೀಸ್ ಇಲಾಖೆಯ ಕೆಲವೊಂದು ವರ್ಗದ ಹುದ್ದೆಗಳ ಅಂದರೆ, 5 ವಿವಿಧ ವೃಂದ/ಹುದ್ದೆಗಳ ವೇತನ ಶ್ರೇಣಿಗಳನ್ನು ದಿನಾಂಕ: 01-08-2019ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಆದೇಶಿಸಿರುತ್ತದೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಶ್ರೀ ರಾಘವೇಂದ್ರ ಔರಾದಕರ್ ಸಮಿತಿಯು ಹಿಂದಿನ 2012ರ ಪರಿಷ್ಕೃತ ವೇತನ ಶ್ರೇಣಿಗಳಿಗೆ ಸಂವಾದಿಯಾಗಿ ವೇತನ ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಿರುತ್ತದೆ. 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ, ಪೊಲೀಸ್ ಇಲಾಖೆಯ ಪೊಲೀಸ್ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನೂ ಒಳಗೊಂಡಂತೆ ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು

ಪರಿಷ್ಕರಿಸಿ, 2018ರ ಪರಿಷ್ಕೃತ ವೇತನ ಶ್ರೇಣಿಗಳನ್ನು ದಿನಾಂಕ: 01-07-2017ರಿಂದ ಜಾರಿಗೆ ಬರುವಂತೆ ಅನುಷ್ಠಾನಗೊಳಿಸಲಾಗಿರುತ್ತದೆ. ಅದರಂತೆ, ಕರ್ನಾಟಕ ನಾಗರಿಕ ಸೇವಾ(ಪರಿಷ್ಕೃತ ವೇತನ) ನಿಯಮಗಳು, 2018ರ ನಿಯಮಗಳ, ನಿಯಮ 7(2)ರನ್ವಯ ನೀಡಲಾದ 4ನೇ ಅನುಸೂಚಿಯಲ್ಲಿ, ಹಳೆಯ ವೇತನ ಶ್ರೇಣಿಗೆ ಸಂವಾದಿಯಾಗಿ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನ ನಿಗದಿಪಡಿಸಲು ಫಿಟ್‌ಮೆಂಟ್ ಕೋಷ್ಟಕವನ್ನು ನೀಡಲಾಗಿರುತ್ತದೆ. ಆದುದರಿಂದ, ವೇತನ ಶ್ರೇಣಿಗಳನ್ನು ಮೇಲ್ದರ್ಜೆಗೇರಿಸಿದ ನಂತರ ಪುನ: ಫಿಟ್‌ಮೆಂಟ್ ಕೋಷ್ಟಕ ನೀಡುವ ಪ್ರಮೇಯ ಉದ್ಭವಿಸುವುದಿಲ್ಲ. 2018ರ ಪರಿಷ್ಕೃತ ವೇತನ ಶ್ರೇಣಿಗಳ ಜಾರಿಯ ನಂತರದಲ್ಲಿ ಪೊಲೀಸ್ ಸಿಬ್ಬಂದಿಗಳ ವೇತನ ಪರಿಷ್ಕರಣೆಯಲ್ಲಿ ಸಾಕಷ್ಟು ಹೆಚ್ಚಳವಾಗಿರುತ್ತದೆ.

ಮುಂದುವರೆದು, 2018ರ ಪರಿಷ್ಕೃತ ವೇತನ ಶ್ರೇಣಿಗಳ ಜಾರಿಯ ನಂತರದಲ್ಲಿ 6ನೇ ರಾಜ್ಯ ವೇತನ ಆಯೋಗದ ಎರಡನೇ ಸಂಪುಟದ ವರದಿಯಲ್ಲಿನ ಶಿಫಾರಸ್ಸುಗಳನ್ನು ಪರಿಶೀಲಿಸಿದ ರಾಜ್ಯ ಸರ್ಕಾರವು ಪೊಲೀಸ್ ಇಲಾಖೆಯ ಕೆಲವೊಂದು ವರ್ಗದ ಹುದ್ದೆಗಳ ವೇತನ ಶ್ರೇಣಿಗಳನ್ನು ಆಯೋಗದ ಶಿಫಾರಸ್ಸಿನಂತೆ ಮೇಲ್ದರ್ಜೆಗೇರಿಸಿ ಪರಿಷ್ಕರಿಸಿ ಆದೇಶ ಹೊರಡಿಸಲಾಗಿರುತ್ತದೆ. 2018ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ಈಗಾಗಲೇ ವೇತನ ನಿಗದಿಗೊಂಡಿರುವ ಪೊಲೀಸ್ ಇಲಾಖೆಯ ಪೊಲೀಸ್ ಸಿಬ್ಬಂದಿಗಳ ವೇತನವು ಪರಿಷ್ಕರಿಸಲಾದ/ಹೆಚ್ಚಳ ಮಾಡಲಾದ ವೇತನ ಶ್ರೇಣಿಯಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ನಿಯಮ 43ರಡಿ ಪುನರ್ ನಿಗದಿಗೊಳ್ಳುತ್ತದೆ. ಅಂದಮೇಲೆ, 7 ವರ್ಷಗಳ ಸೇವೆ ಸಲ್ಲಿಸಿರುವ ಸಿಬ್ಬಂದಿಗಳ ಮತ್ತು ಹೊಸದಾಗಿ ಸೇವೆಗೆ ಸೇರಿದ ಸಿಬ್ಬಂದಿಗಳ ವೇತನದಲ್ಲಿ ತಾರತಮ್ಯ ಉಂಟಾಗುವ ಪ್ರಮೇಯವೇ ಉದ್ಭವಿಸುವುದಿಲ್ಲ.

ಬದಲಾದ ಸನ್ನಿವೇಶ ಮತ್ತು ಸಂದರ್ಭಗಳಲ್ಲಿ ಪೊಲೀಸ್ ಇಲಾಖೆಯ ಕಾರ್ಯಾಚರಣೆ ಮಟ್ಟದ ಪೊಲೀಸ್ ಸಿಬ್ಬಂದಿಗಳು ಎದುರಿಸುತ್ತಿರುವ ತೊಂದರೆಗಳನ್ನು ಗಮನಿಸಿದ ಸರ್ಕಾರವು ಕೆಲವೊಂದು ವರ್ಗದ ಪೊಲೀಸ್ ಸಿಬ್ಬಂದಿಗಳಿಗೆ ಲಭ್ಯವಿದ್ದ ಕಷ್ಟ ಪರಿಹಾರ ಭತ್ಯೆಯಂತಹ ವಿಶೇಷ ಭತ್ಯೆಯನ್ನು ಹುದ್ದೆಗಳಿಗನುಸಾರವಾಗಿ ದಿನಾಂಕ:01-11-2019ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪರಿಷ್ಕರಿಸಲಾಗಿರುತ್ತದೆ:

| ಕ್ರ ಸಂ. | ಹುದ್ದೆ / ವೃಂದ | ಮಾಸಿಕ ಕಷ್ಟ ಪರಿಹಾರ ಭತ್ಯೆಯ ಪ್ರಸ್ತುತ ದರ (ರೂ.) | ಮಾಸಿಕ ಕಷ್ಟ ಪರಿಹಾರ ಭತ್ಯೆಯ ಪರಿಷ್ಕೃತ ದರ (ರೂ.) |
|---|---|---|---|
| 1 | ಅನುಯಾಯಿ/ಜಮೇದಾರ್ ಅನುಯಾಯಿ | 1000 | 2000 |
| 2 | ಪೊಲೀಸ್ ಪೇದೆ | 2000 | 3000 |
| 3 | ಮುಖ್ಯ ಪೇದೆ | 1000 | 2000 |
| 4 | ಸಹಾಯಕ ಸಬ್-ಇನ್ಸ್‌ಪೆಕ್ಟರ್ | 1000 | 2000 |
| 5 | ಪೊಲೀಸ್ ಸಬ್-ಇನ್ಸ್‌ಪೆಕ್ಟರ್ | 1000 | 2000 |

ಪೊಲೀಸ್ ಇಲಾಖೆಯ ಪೊಲೀಸ್ ಸಿಬ್ಬಂದಿಗಳಿಗೆ, ಈ ಮೇಲಿನ ಭತ್ಯೆಗಳಲ್ಲದೇ, ಸಮವಸ್ತ್ರ ಭತ್ಯೆ, ಸಮವಸ್ತ್ರ ನಿರ್ವಹಣಾ ಭತ್ಯೆ, ಕ್ಯಾಂಟೀನ್ ಭತ್ಯೆ ಮುಂತಾದ ಇತರೆ ವಿಶೇಷ ಭತ್ಯೆಗಳೂ ಸಹ ಲಭ್ಯವಿರುತ್ತವೆ.

**ಸಂ: ಆಇ 9 ಎಸ್‌ಆರ್‌ಪಿ 2021**

ಬಿಎಸ್

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ